ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 71-81
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಡಾ.ದೊಡ್ಡರಂಗೇಗೌಡ ಅವರು ರಚಿಸಿದ ಜೀವನ ಚರಿತ್ರೆಗಳು

**ಡಾ. ಮಹಮದರಫಿ ಆರ್. ದೊಡಮನಿ**
ಸಹ ಪ್ರಾಧ್ಯಾಪಕರು, ಶ್ರೀ ಕೆ.ಎಂ.ಎಂ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸವದತ್ತಿ, ಸವದತ್ತಿ ತಾಲೂಕು, ಬೆಳಗಾವಿ ಜಿಲ್ಲೆ.

**Abstract:**
*ಪಾಶ್ಚಿಮಾತ್ಯ ಸಾಹಿತ್ಯ ಪ್ರಭಾವದಿಂದ ಬಂದ ಗದ್ಯ ಸಾಹಿತ್ಯ ಪ್ರಕಾರಗಳಲ್ಲಿ ಜೀವನ ಚರಿತ್ರೆಯು ಒಂದು. "ಪ್ರಪಂಚದ ಯಾವ ಭಾಷೆಯಲ್ಲಿಯೂ ಮೊಟ್ಟಮೊದಲಿನ ಜೀವನ ಚರಿತ್ರೆಗಳು ವಿಚಾರ ದೃಷ್ಟಿ ಐತಿಹಾಸಿಕ ಪ್ರಜ್ಞೆಯಿಂದ ಹುಟ್ಟಿದುದಲ್ಲ. ಆರಾಧನಾ ದೃಷ್ಟಿಯಿಂದ ಬೆಳೆದವು. ಈ ಬಗೆಯ ಜೀವನ ಚರಿತ್ರೆಯ ಅಂಕುರಾವಸ್ಥೆಯನ್ನು ವಿಶ್ವದ ಜನಪದ ಗೇಯ ಕಾವ್ಯಗಳಲ್ಲಿಯೂ, ಪೌರಾಣಿಕ ಕಥೆಗಳಲ್ಲಿಯೂ ಕಾಣಬಹುದು. ಹೋಮರ ಕವಿಯ ಇಲಿಯಡ್ ಮತ್ತು ಓಡಿಸಿ, ಭಾರತದ ರಾಮಾಯಣ–ಮಹಾಭಾರತಗಳು ಮತ್ತು ಈಚಿನ ಕಾಲಗಳಲ್ಲಿ ಗ್ರಂಥಸ್ಥವಾಗುವುದಕ್ಕೆ ಮೊದಲ ಮುಖ್ಯಸ್ಥರಾಗಿ ಕರ್ಣಾಕರ್ಣಿಕೆಯಾಗಿ ಸಾಗಿಬಂದವು. ಅಲೌಕಿಕ ಪುರುಷರಾದ ದೇವತೆಗಳ, ವೀರರ ಆರಾಧನೆಯ ಮನೋವೃತ್ತಿಯೇ (ಹಿರೋವರ್ಷಿಪ್) ಜೀವನ ಚರಿತ್ರೆಯ ಹುಟ್ಟಿಗೆ ಕಾರಣ". ಅನ್ಯರ ವಿಚಾರ ತಿಳಿದುಕೊಳ್ಳುವ ಅಂಥವರ ಆದರ್ಶಗಳನ್ನು ಅನುಸರಿಸುವ, ಪ್ರವೃತ್ತಿ ಮಾನವನಲ್ಲಿ ಸಹಜವಾಗಿ ರೂಪಗೊಂಡಾಗ ಜೀವನ ಚರಿತ್ರೆಗಳು ಹುಟ್ಟಿಕೊಳ್ಳಲು ಸಾಧ್ಯವಾಗುತ್ತವೆ. ಪ್ರಸ್ತುತ ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ ಪ್ರಕಾಶನದ ಅಡಿಯಲ್ಲಿ ಅಮೃತ ಮಹೋತ್ಸವ ಪುಸ್ತಕ ಮಾಲೆಯಲ್ಲಿ ಪ್ರಕಟವಾದ ದೊಡ್ಡರಂಗೇಗೌಡರು ರಚಿಸಿದ 'ವಿಜಯ ಭಾಸ್ಕರ' (2009), ಹಾಗೂ 'ಪಿ. ಕಾಳಿಂಗರಾವ' (2009) ಎಂಬ ಎರಡು ಕೃತಿಗಳನ್ನು ಕುರಿತು ಈ ಅಧ್ಯಯನದಲ್ಲಿ ವಿವೇಚನೆ ಮಾಡಲಾಗಿದೆ.*

**Keywords:** *ಕನ್ನಡ ಸಾಹಿತ್ಯ, ಜೀವನ ಚರಿತ್ರೆ, ವಿಜಯ ಭಾಸ್ಕರ, ಪಿ.ಕಾಳಿಂಗರಾವ.*

## ಪೀಠಿಕೆ

ಜೀವನ ಚರಿತ್ರೆ ಎಂದರೆ ಹೊಗಳಿಕೆಯೂ ಅಲ್ಲ, ತೆಗಳಿಕೆಯೂ ಅಲ್ಲ. ತಾನು ಆರಿಸಿಕೊಂಡ ವ್ಯಕ್ತಿಯ ಪ್ರಾಮಾಣಿಕ ಚಿತ್ರ ಆಗಿರಬೇಕು. ಸದ್ಗುಣಗಳನ್ನು ಹೊಗಳುವುದಾಗಲಿ, ದುರ್ಗುಣಗಳನ್ನು ತೆಗಳುವುದಾಗಲಿ ಮಾಡದೇ ಭಾವಾವೇಶವಿಲ್ಲದೇ, ಎರಡನ್ನೂ ಚಿತ್ರಿಸುವುದು ಅದರ ಉದ್ದೇಶ. ಓದುಗರ ಮನಸ್ಸಿನಲ್ಲಿ ಕೊನೆಯವರೆಗೂ ಉಳಿಯುವ ಒಂದು ಪ್ರಭಾವ ಅದರಿಂದ ಆಗಬೇಕು.

"ಜೀವನ ಚರಿತ್ರೆಯು 'ನೇರವಾಗಿ, ಸರಳವಾಗಿ, ನಿರ್ಭಯವಾಗಿ ಹಾಗೂ ಉದಾರವಾಗಿ ಉಕ್ತಗೊಂಡ ಸತ್ಯವೇ ಜೀವನ ಚರಿತ್ರೆಯ ಸಂಮ್ಮೋಹನ ಗುಣವೆಂದು"[1] ಆಲ್‌ಫ್ರೆಡ್ ಆರ್ ಕಾಂಗ್ಲಿಗ್‌ರು ಹೇಳುತ್ತಾರೆ. ಓದುಗನಿಗೆ ಗೊಂದಲಕ್ಕೆ ಎಡೆಮಾಡಿಕೊಡದೆ, ಇರುವ ವಿಷಯ ಸತ್ಯವಾದದು

[1] ಹಳ್ಳಿಕೇರಿ, ಎಫ್.ಟಿ., ಕೆ.ರವೀಂದ್ರನಾಥ, (ಸಂ.) ದಶಕದ ಕನ್ನಡ ಸಾಹಿತ್ಯ, ಪುಟ. 40

**Please cite this article as:** ಮಹಮದರಫಿ ಆರ್. ದೊಡಮನಿ. (2024). ಡಾ. ದೊಡ್ಡರಂಗೇಗೌಡ ಅವರು ರಚಿಸಿದ ಜೀವನ ಚರಿತ್ರೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(3), 71–81

ಎನ್ನಿಸಬೇಕು. ವ್ಯಕ್ತಿಯೊಬ್ಬನ ಸಮಷ್ಟಿ ವ್ಯಕ್ತಿತ್ವವನ್ನು ವೃಷ್ಟಿಯಾಗಿ ರೂಪಿಸುವುದೇ ಜೀವನ ಚರಿತ್ರೆ ಎನ್ನಬಹುದು.

"ಜೀವನ ಚರಿತ್ರೆ ಎಂಬ ವಿಶಿಷ್ಟ ಪ್ರಕಾರದ ಸಾಹಿತ್ಯಕ್ಕೆ ಜೇಮ್ಸ್ ಬಾಸ್‌ವೆಲ್ ತಳಹದಿಯನ್ನು ಹಾಕಿಕೊಟ್ಟರು. 18ನೇ ಶತಮಾನದ ಇಂಗ್ಲಿಷ್ ಸಾಹಿತ್ಯ ಕ್ಷೇತ್ರದ ದಿಗ್ಗಜನಾದ ಸಾಮ್ಯುಯಲ್ ಜಾನ್‌ಸನ್‌ರನ್ನು ಕುರಿತು ಅವರ ಸಮಕಾಲೀನನಾದ ಬಾಸವೆಲ್ ಬರೆದ *`Boswell's Life of Jhonson'* (ಜಾನಸನ್‌ರನ್ನು ಕುರಿತು ಬಾಸವೆಲ್ ಬರೆದ ಜೀವನ ಚರಿತ್ರೆ) ಜೀವನ ಚರಿತ್ರೆ ಎಂಬ ಸಾಹಿತ್ಯ ಪ್ರಕಾರಕ್ಕೆ ನಾಂದಿಯಾಯಿತೆನ್ನಬಹುದು"[2] ಎಂಬುದಾಗಿ ಸುಚೇತಾ ನವರತ್ನ ಅವರು ಅಭಿಪ್ರಾಯಪಡುತ್ತಾರೆ. ಬದುಕು ಬರಹ, ಜೀವನ ಸಾಧನೆ, ವ್ಯಕ್ತಿ ಚಿತ್ರ ಹೀಗೆ ವಿವಿಧ ಬಗೆಯಲ್ಲಿ ಇದು ಪ್ರಚಲಿತ ಮಾಧ್ಯಮವಾಗಿ ಜನಪ್ರಿಯತೆ ಪಡೆದುಕೊಂಡು ಬೆಳೆದುಬರುತ್ತಿರುವ ಸಾಹಿತ್ಯ ಪ್ರಕಾರವಾಗಿದೆ.

ಕನ್ನಡದಲ್ಲಿ ಈ ಸಾಹಿತ್ಯ ರೂಪಕ್ಕೆ ಅಷ್ಟೊಂದು ಪರಂಪರೆ ಇಲ್ಲವಾದರೂ ಪ್ರಾಚೀನ ಕರ್ನಾಟಕದ ಜನ ಜೀವನದ ಬಗ್ಗೆ ಸಾಕಷ್ಟು ವಿವರಗಳು ದೊರೆಯುತ್ತವೆ. ಶಾಸನಗಳು, ಮಾಸ್ತಿಗಲ್ಲು, ವೀರಗಲ್ಲು, ನಿಷಿದಿಗಲ್ಲುಗಳಲ್ಲಿನ ಕನ್ನಡದ ಹಲವಾರು ಪುಣ್ಯಪುರುಷರ ತ್ಯಾಗ, ಬಲಿದಾನ, ವೀರ ಮರಣಗಳ ಕುರಿತು ಅವರ ಜೀವನದ ಸಾಧನೆಯ ವಿವರಗಳನ್ನು ನಿರೂಪಿಸುವ ಮಾಹಿತಿಗಳು ದೊರೆಯುತ್ತವೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಒಂದು ಅಂದಾಜಿನ ಪ್ರಕಾರ 2000ಕ್ಕೂ ಹೆಚ್ಚು ಜೀವನ ಚರಿತ್ರೆಗಳಿರಬಹುದೆಂಬ ಊಹೆ ಇದೆ. ಸ್ವಾತಂತ್ರ್ಯ ಪೂರ್ವದಲ್ಲಿ ಹರ್ಡೇಕರ ಮಂಜಪ್ಪ, ನಾ.ಶ್ರೀ.ರಾಜಪುರೋಹಿತ, ಹುರುಳಿ ಭೀಮರಾಯ, ಶಿ.ಕೆ.ವೆಂಕಟರಾಮಯ್ಯ, ರಾ.ಹ. ದೇಶಪಾಂಡೆ, ಡಿ.ವಿ.ಗುಂಡಪ್ಪ, ಆಲೂರು ವೆಂಕಟರಾಯರು, ಎಂ.ಎಸ್.ಪುಟ್ಟಣ್ಣ, ಕುವೆಂಪು ಹೀಗೆ ಹಲವಾರು ಸಾಹಿತಿಗಳು ಜೀವನ ಚರಿತ್ರೆ ಕೃತಿಗಳನ್ನು ಆಕರ್ಷಕವಾಗಿ ಬರೆದು ಸಹೃದಯರಿಗೆ ಪ್ರೀಯವಾದ ಸಾಹಿತ್ಯ ಪ್ರಕಾರವನ್ನಾಗಿಸಿದರು.

ಸ್ವಾತಂತ್ರ್ಯನಂತರ ಕಾಲದಲ್ಲಿ ಎಸ್.ಕೆ.ನರಸಿಂಹಮೂರ್ತಿ, ಗೌರೀಶ ಕಾಯ್ಕಿಣಿ, ಸಿದ್ಧವನಹಳ್ಳಿ ಕೃಷ್ಣಶರ್ಮ, ದೇಜಗೌ., ರಂ.ಶ್ರೀ.ಮುಗಳಿ ಮುಂತಾದವರು ಈ ಪ್ರಕಾರವನ್ನು ಕಟ್ಟಿಕೊಟ್ಟರು. ಅನಂತರ ಮಧುರಚೆನ್ನ, ಈಶ್ವರ ಸಣ್ಣಕಲ್ಲ, ಜಯದೇವಿತಾಯಿ ಲಿಗಾಡೆ, ಡಿ.ಎಸ್.ಕರ್ಕಿ, ಸ.ಸ.ಮಾಳವಾಡ, ಬಸವರಾಜ ಕಟ್ಟಿಮನಿ, ಸಿದ್ದಯ್ಯ ಪುರಾಣಿಕರಂಥವರು ಜೀವನ ಚರಿತ್ರೆ ಪ್ರಕಾರಕ್ಕೆ ಹೊಸ ಮೆರಗು ತಂದುಕೊಟ್ಟರು.

ಜೀವನ ಚರಿತ್ರೆ ರಚನೆಯ ಕುರಿತು ಹಲವು ವಿದ್ವಾಂಸರು ವಿವಿಧ ರೀತಿಯಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. 'ಜೀವನ ಚರಿತ್ರೆ ಬರೆಯುವದು ಬಹಳ ಒಳ್ಳೆಯ ಜೀವನ ನಡೆಸಿದಷ್ಟೇ ಕಷ್ಟವೆಂದು ಲಿಟನ್ ಸ್ಟ್ಯಾಚಿ ಹೇಳಿದ್ದಾನೆ. 1683 ರಲ್ಲಿ ಡ್ರೈಡನ್ *`Biography'* ಪದವನ್ನು ಮೊದಲ ಸಲ ಬಳಸಿದ್ದನ್ನು ಕಾಣುತ್ತೇವೆ. ಆಕ್ಸಫರ್ಡ್ ಡಿಕ್ಷನರಿಯಲ್ಲಿ ವ್ಯಕ್ತಿಗಳ ಬದುಕಿನ ಸಾಹಿತ್ಯಾತ್ಮಕ ಚಾರಿತ್ರಿಕ ಕಥನವೇ 'ಜೀವನ ಚರಿತ್ರೆ' ಎಂದು ಹೇಳಲಾಗಿದೆ. ಶಿವರಾಂ ಕಾರಂತರು ನಾವು ಬರೆಯುವ ಜೀವನ ಚರಿತ್ರೆಯು ಚೆನ್ನಾಗಿ ಆಗಬೇಕಾದರೆ ಬರೆಯುವ ವ್ಯಕ್ತಿಗೂ ಬರವಣಿಗೆಗೆ ಗುರಿಯಾದ ಮನುಷ್ಯನಿಗೂ ನಿಟವಾದ ಪರಿಚಯ ಇರಲೇಬೇಕು ಎಂಬುದಾಗಿ ಹೇಳಿದ್ದಾರೆ. ವಿಮರ್ಶಕರಾದ ಗಿರಡ್ಡಿ ಗೋವಿಂದರಾಜ ಅವರು ಜೀವನ ಚರಿತ್ರೆಗಳೆಲ್ಲ ವ್ಯಕ್ತಿಗಳನ್ನು ನಾಯಕರನ್ನಾಗಿ ಕಲ್ಪಿಸಿಕೊಂಡು ವೈಭವಿಕರಿಸುವುದಕ್ಕೆ ರಚನೆಯಾದ ಪ್ರಶಂಸನಾತ್ಮಕ ಕೃತಿಗಳು ನಮ್ಮಲ್ಲಂತೂ ವಸ್ತುನಿಷ್ಠವಾದ ಲವಲವಿಕೆಯಿಂದ ಓದಿಸಿಕೊಳ್ಳುವ ಜೀವನ ಚರಿತ್ರೆಗಳು ವಿರಳ ಎನ್ನುತ್ತಾರೆ. ದೇ.ಜವರೇಗೌಡರು ಹೇಳುವಂತೆ "ತೊಟ್ಟಿಲಿಂದ

[2] ಹಳ್ಳಿಕೇರಿ, ಎಫ್.ಟಿ., ಕೆ.ರವೀಂದ್ರನಾಥ, (ಸಂ.). ದಶಕದ ಕನ್ನಡ ಸಾಹಿತ್ಯ, ಪುಟ. 40

ಸಮಾಧಿವರೆಗಿನ ಒಬ್ಬ ವ್ಯಕ್ತಿಯ ಜೀವನಾವಧಿಯಲ್ಲಿ ನಡೆಯುವ ಘಟನೆಗಳೂ ತನ್ನ ಅಸ್ತಿತ್ವಕ್ಕಾಗಿ ಹಾಗೂ ಅಭ್ಯುದಯಕ್ಕಾಗಿ ಅವನು ನಡೆಸುವ ಪ್ರಯತ್ನ ಮತ್ತು ಸಾಹಸಗಳು, ಅವನು ಎದುರಿಸಬಹುದಾದ ಎಡರು ತೊಡರುಗಳು ಮತ್ತು ಸಮಸ್ಯೆಗಳು ಅವುಗಳ ನಿವಾರಣೆಗಾಗಿ ಅವನು ಹುಡುಕುವ ಉಪಾಯಗಳು, ಅವನು ಸಂಧಿಸಿರಬಹುದಾದ ವ್ಯಕ್ತಿಗಳು, ಅಂತೆಯೇ ಅನೇಕ ಸಾಮಾಜಿಕ ಸಂಬಂಧಗಳು, ಅವನು ಅನುಭವಿಸಿರಬಹುದಾದ ಸುಖ–ದುಃಖಗಳು, ಕಷ್ಟ–ನಷ್ಟಗಳು, ಅವನು ಪಟ್ಟಪಾಡುಗಳು, ಸೋಲು–ಗೆಲುವುಗಳು ಒಟ್ಟಿನಲ್ಲಿ ಅವನ ಸಾಧನೆ ಸಿದ್ಧಿಗಳು, ಜೀವನ ಚರಿತ್ರೆಯ ವಸ್ತುಗಳಾಗುತ್ತವೆ”[3] ಎಂಬ ಈ ವ್ಯಾಖ್ಯೆಯ ಗಮನಾರ್ಹವಾದುದ್ದಾಗಿದೆ.

ಒಟ್ಟಿನಲ್ಲಿ ವಸ್ತುನಿಷ್ಠ ಮತ್ತು ವ್ಯಕ್ತಿನಿಷ್ಠ ಜೀವನ ಚರಿತ್ರೆಗಳು ಸಂಸ್ಕೃತಿಗೆ ಪ್ರತಿಬಿಂಬವಾಗಬೇಕು. ಯುವ ಪೀಳಿಗೆಗೆ ಈ ಜೀವನ ಚರಿತ್ರೆಗಳು ದಾರಿದೀಪವಾಗಬೇಕು ಎಂಬುದು ಸ್ಪಷ್ಟವಾಗುತ್ತದೆ. ಪಾಶ್ಚಿಮಾತ್ಯ ಸಾಹಿತ್ಯದ ಪ್ರಭಾವದಿಂದ ಬಂದ ಈ ಸಾಹಿತ್ಯ ರೂಪವು ಕನ್ನಡದಲ್ಲಿ ಇಂದು ಸಾಕಷ್ಟು ಕೃತಿಗಳು ರಚನೆಯಾಗತೊಡಗಿವೆ.

ಕನ್ನಡದಲ್ಲಿ ಪ್ರಮುಖವಾಗಿ ಮಹಾತ್ಮರ, ಶರಣರ, ವಿಜ್ಞಾನಿಗಳ, ಕಲಾವಿದರ, ಸಾಹಿತಿಗಳ, ಧಾರ್ಮಿಕ ನಾಯಕರ, ರಾಜಕಾರಣಿಗಳ, ಕ್ರಾಂತಿಕಾರಿಗಳ ಹಾಗೂ ಕರ್ನಾಟಕ ಏಕೀಕರಣಕ್ಕಾಗಿ ದುಡಿದ ಮಹನೀಯರ ಜೀವನ ಚರಿತ್ರೆಗಳು ರಚನೆಯಾಗಿರುವುದು ಕಂಡುಬರುತ್ತದೆ. ಹೀಗೆ ಅಸಾಮಾನ್ಯ ವ್ಯಕ್ತಿಗಳಲ್ಲಿರುವ ಆದರ್ಶಗಳನ್ನು ಕನ್ನಡ ನಾಡು, ನುಡಿಗೆ ಅವರು ಸಲ್ಲಿಸಿದ ಕೊಡುಗೆಯನ್ನು ಸಾಧು ಸಂತರ, ವಾಣಿಗಳನ್ನು ತಮ್ಮ ಕೃತಿಯಲ್ಲಿ ನಮ್ಮ ಹಲವಾರು ಲೇಖಕರು ಚಿತ್ರಿಸುತ್ತಾ ಬಂದಿದ್ದಾರೆ. ಅಪರೂಪದ ವ್ಯಕ್ತಿಗಳ ವ್ಯಕ್ತಿತ್ವಗಳನ್ನು ಚಿತ್ರಿಸುವ ಮೂಲಕ ಕೃತಿಕಾರರು ಸಹೃದಯ ಓದುಗರ ಮೇಲೆ ಪ್ರಭಾವ ಬೀರಿದ್ದಾರೆ. ಈ ಸಾಲಿನಲ್ಲಿ ಲೇಖಕ ದೊಡ್ಡರಂಗೇಗೌಡ ಅವರು ಸಂಗೀತ ಸಾಧಕರ ಜೀವನ ಚರಿತ್ರೆಗಳು ನಿಲ್ಲುವಂಥವುಗಳಾಗಿವೆ.

ದೊಡ್ಡರಂಗೇಗೌಡರು ಕನ್ನಡ ನಾಡಿನ ಅಪರೂಪದ ಸಂಗೀತ ಸಾಮ್ರಾಟರಾದ, ಹಿಂದೂಸ್ತಾನಿ ಸಂಗೀತ ಕ್ಷೇತ್ರಕ್ಕೆ ಮಹತ್ತರವಾದ ಕೊಡುಗೆ ನೀಡಿದ ವಿಜಯಭಾಸ್ಕರ ಹಾಗೂ ಪಿ. ಕಾಳಿಂಗರಾವ್ ಅವರನ್ನು ತಮ್ಮ ಜೀವನ ಚರಿತ್ರೆಗಳ ರಚನೆಗೆ ಆಯ್ಕೆ ಮಾಡಿಕೊಂಡಿದ್ದಾರೆ. ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ ಪ್ರಕಾಶನದ ಅಡಿಯಲ್ಲಿ ಅಮೃತ ಮಹೋತ್ಸವ ಪುಸ್ತಕ ಮಾಲೆಯಲ್ಲಿ ಪ್ರಕಟವಾದ ದೊಡ್ಡರಂಗೇಗೌಡರು ರಚಿಸಿದ 'ವಿಜಯ ಭಾಸ್ಕರ' (2009), ಹಾಗೂ 'ಪಿ. ಕಾಳಿಂಗರಾವ' (2009) ಎಂಬ ಎರಡು ಕೃತಿಗಳನ್ನು ಕುರಿತು ಈ ಅಧ್ಯಯನದಲ್ಲಿ ವಿವೇಚನೆ ಮಾಡಲಾಗಿದೆ.

**ವಿಜಯ ಭಾಸ್ಕರ**

ದೊಡ್ಡರಂಗೇಗೌಡರಿಂದ 2009 ರಲ್ಲಿ ರಚಿಸಲ್ಪಟ್ಟ 'ವಿಜಯ ಭಾಸ್ಕರ' ಎಂಬ ಜೀವನ ಚರಿತ್ರೆ ಕೃತಿಯು ಸುಮಾರು 61 ಪುಟಗಳ ವ್ಯಾಪ್ತಿಯನ್ನೊಳಗೊಂಡಿದೆ. ಈ ಕೃತಿಯು 'ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ' ಪ್ರಕಾಶನದಲ್ಲಿ ಪ್ರಕಟಗೊಂಡಿದೆ. ಈ ಕೃತಿಗೆ ಬರಗೂರು ರಾಮಚಂದ್ರಪ್ಪ ಅವರು ಪ್ರಧಾನ ಸಂಪಾದಕರಾಗಿದ್ದು, ಸಂಪಾದಕರ ಮಾತುಗಳನ್ನು ತಿಳಿಸಿದ್ದಾರೆ. ಅದೇ ರೀತಿ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರ ಮಾತುಗಳು ಕಂಡುಬರುತ್ತದೆ.

ದೊಡ್ಡರಂಗೇಗೌಡರೇ ಹೇಳುವಂತೆ "1975 ರಲ್ಲಿ ನಾನು ಕನ್ನಡ ಚಲನಚಿತ್ರಗಳಿಗೆ ಹಾಡುಗಳನ್ನು ಬರೆಯಲು ಪ್ರಾರಂಭಿಸಿದಾಗ ಮೊಟ್ಟಮೊದಲಿಗೆ ಗೀತ ರಚನೆ ಮಾಡಿದ್ದೇ 'ಸಂಗೀತ ಸಾಮ್ರಾಟ' ವಿಜಯ ಭಾಸ್ಕರ್ ಅವರು ಕೊಟ್ಟ ಸ್ವರ ಪ್ರಸ್ತಾರಗಳಿಗೆ, ನನ್ನ ಮೊದಲ ಗೀತೆಯು ಅಮೂರ್ತದಿಂದ ಮೂರ್ತ ಸ್ವರೂಪ ಪಡೆದದ್ದೇ ಅವರು ನನ್ನ ಬೆನ್ನು ತಟ್ಟಿ ಪ್ರೋತ್ಸಾಹಿಸಿದ್ದರಿಂದ. ನನ್ನ ಬಾಲ್ಯ ಸ್ನೇಹಿತರಾದ ಶ್ರೀ

[3] ನಾಗರಾಜ ಹುಣಸಿಕಟ್ಟಿ, ಪ್ರಭು ಗಂಜಹಾಳ. (ಸಂ). *ಜೀವನ ಚರಿತ್ರೆ ಮತ್ತು ಆತ್ಮಚರಿತ್ರೆ*, ಪುಟ. 4

ಬರಗೂರು ರಾಮಚಂದ್ರಪ್ಪ ಅವರು ವಿಜಯ ಭಾಸ್ಕರ್ ಅವರನ್ನು ಕುರಿತು 'ಯಾರ ಹತ್ತಿರ ಬರೆಸೋದು' ಎಂದು ಸಂಪಾದಕ ಮಂಡಳಿಯ ಗೆಳೆಯರ ಬಳಿ ಪ್ರಸ್ತಾಪಿಸಿದಾಗ 'ನಾನು ಬರೆಯುತ್ತೇನೆ' ಎಂದು ಸ್ವಇಚ್ಛೆಯಿಂದ ಒಪ್ಪಿಕೊಳ್ಳಲು ಮುಖ್ಯ ಕಾರಣ ವಿಜಯ ಭಾಸ್ಕರ್ ಬದುಕಿದ್ದಾಗ ಅವರು ನನಗೆ ನೀಡಿದ ಪ್ರೋತ್ಸಾಹ, ತೋರಿದ ಸ್ನೇಹ, ಪ್ರೀತಿ, ವಿಶ್ವಾಸದ ಪ್ರಭಾವ'[4] ಎಂಬುದಾಗಿ ಈ ಜೀವನ ಚರಿತ್ರೆ ಕೃತಿಯ ರಚನೆಗೆ ಕಾರಣವಾದ ವಿಷಯ ಸ್ಪಷ್ಟಪಡಿಸುತ್ತಾರೆ.

ಈ ಕೃತಿಗೆ ಪ್ರಧಾನ ಸಂಪಾದಕರ ಮಾತು ಬರೆದ ಬರಗೂರು ರಾಮಚಂದ್ರಪ್ಪನವರು "ದೊಡ್ಡರಂಗೇಗೌಡರು ಕನ್ನಡ ಕಾವ್ಯ ಕ್ಷೇತ್ರದಲ್ಲಿ ಹೆಸರು ಮಾಡಿದ ಲೇಖಕರು. ನನ್ನ ಬಾಲ್ಯ ಸ್ನೇಹಿತರು, ವಿಜಯ ಭಾಸ್ಕರ್ ಅವರನ್ನು ಚೆನ್ನಾಗಿ ಬಲ್ಲವರು ಅದು ಈ ಪುಸ್ತಕ ರೂಪದಲ್ಲಿ ಗೋಚರವಾಗುತ್ತದೆ"[5] ಎಂದು ಅಭಿಪ್ರಾಯಪಟ್ಟಿದ್ದಾರೆ.

'ವಿಜಯ ಭಾಸ್ಕರ್' ಎಂಬ ಜೀವನ ಚರಿತ್ರೆಯು ದೊಡ್ಡರಂಗೇಗೌಡರ ಸೃಜನಶೀಲತೆಗೆ ಹಿಡಿದ ಕನ್ನಡಿ. ವಿಜಯ ಭಾಸ್ಕರ್, ಶ್ರೀರಾಮ ಪೂಜಾ, ನಾಂದಿಯ ನಡಿಗೆ, ಬೆಳ್ಳಿಮೋಡದ ಅಂಚಿನಲ್ಲಿ, ಸಂಗೀತದ ಹೃದಯ ಸಂಗಮ, ಸೃಜನಶೀಲ ಪ್ರಯೋಗ ಎಂಬ ಆರು ಅಧ್ಯಾಯಗಳನ್ನು ಈ ಕೃತಿ ಒಳಗೊಂಡಿದೆ. ಈ ಕೃತಿಯಲ್ಲಿ ವಿಜಯ ಭಾಸ್ಕರ ಅವರ ವ್ಯಕ್ತಿ ಚಿತ್ರಣ ಕವಿತೆಗಳು ಕಂಡುಬರುತ್ತವೆ. ಕೃತಿಯ ಕೊನೆಯಲ್ಲಿ ವಿಜಯ ಭಾಸ್ಕರ್‌ರ ಸಂಗೀತ ನಿರ್ದೇಶನದ ಚಲನಚಿತ್ರಗಳು ಹಾಗೂ ಅವರು ಪಡೆದ ಪ್ರಶಸ್ತಿಗಳ ವಿವರಗಳನ್ನು ಅನುಬಂಧದ ರೂಪದಲ್ಲಿ ಕೊಡಲಾಗಿದೆ. ಬದಲಾಗುತ್ತಿರುವ ಆಧುನಿಕ ಸಂದರ್ಭದ ಸನ್ನಿವೇಶದಲ್ಲಿ ನೂರಾರು ಪುಟಗಳುಳ್ಳ ಜೀವನ ಚರಿತ್ರೆಗಳನ್ನು ಓದಲು ಸಮಯ ಸಿಗುವುದಿಲ್ಲ. ಇಂತಹ ಸಂದರ್ಭದಲ್ಲಿ ಸುಮಾರು 72 ಪುಟಗಳಲ್ಲಿಯೇ ಸಂಕ್ಷಿಪ್ತವಾಗಿ ಭಾವಚಿತ್ರಗಳೊಂದಿಗೆ ವಿಜಯ ಭಾಸ್ಕರ್‌ರ ಜೀವನಕ್ಕೆ ಸಂಬಂಧಿಸಿದ ಪ್ರಮುಖ ಘಟನೆಗಳನ್ನು ಕೇಂದ್ರಿಕರಿಸಿ ರಚಿಸಲಾಗಿದೆ.

'ವಿಜಯ ಭಾಸ್ಕರ್' ಎಂಬ ಮೊದಲ ಶೀರ್ಷಿಕೆಯಡಿಯಲ್ಲಿ ಅವರ ಬಾಲ್ಯ ಜೀವನ, ಸಂಗೀತಾಸಕ್ತಿ, ವಿದ್ಯಾಭ್ಯಾಸದ ಕುರಿತಾಗಿ ಮಾಹಿತಿ ಇದೆ. 'ಶ್ರೀರಾಮ ಪೂಜಾ' ಎಂಬ ಎರಡನೆಯ ಶೀರ್ಷಿಕೆಯಡಿ 1954 ರಲ್ಲಿ ಮೊದಲ ಬಾರಿಗೆ ಸಂಗೀತ ನಿರ್ದೇಶಕರಾಗಿ ವಿಜಯ ಭಾಸ್ಕರ್ ಕನ್ನಡ ಚಲನಚಿತ್ರ ಲೋಕಕ್ಕೆ ಪರಿಚಯವಾದುದರ ಕುರಿತಾಗಿ ಚರ್ಚಿಸಲಾಗಿದೆ. ನಂತರ ಹಂತ ಹಂತವಾಗಿ ಅವರ ಸಂಗೀತ ಲೋಕದ ಪಯಣದ ಕುರಿತು ವಿವರ ನೀಡಲಾಗಿದೆ. 'ನಾಂದಿಯ ಹಾಡಿ'ಗೆ ಎಂಬ ಮೂರನೆಯ ಶೀರ್ಷಿಕೆಯಲ್ಲಿ ಪೋಸ್ಟ್ ಮಾಸ್ಟರ್ ಹಾಗೂ ನಾಂದಿ ಚಲನಚಿತ್ರಗಳ ಪ್ರಯೋಗಶೀಲತೆಯ ಸಂಗೀತದ ಕುರಿತು ಮಾಹಿತಿ ನೀಡಲಾಗಿದೆ. 'ಬೆಳ್ಳಿಮೋಡದ ಅಂಚಿನಲ್ಲಿ' ಎಂಬ ನಾಲ್ಕನೆಯ ಶೀರ್ಷಿಕೆಯಲ್ಲಿ 1967 ರಲ್ಲಿ ತೆರೆಕಂಡ 'ಬೆಳ್ಳಿಮೋಡ' ಚಲನಚಿತ್ರಕ್ಕೆ ವಿಜಯ ಭಾಸ್ಕರ್ ನೀಡಿದ ಸಂಗೀತ ಗಮನಿಸಿ 'ಸೌಮ್ಯ ಅನುಲೋಮ ವಿಲೋಮ ಸಂಗೀತದ ಸ್ವರ ಪ್ರಸ್ತಾರಗಳಿಂದ ಶಬ್ದಸವಿಯ ರಸಭಾಷ್ಯದಿಂದ ರೀರೆಕಾರ್ಡಿಂಗ್ ಕ್ರಿಯೆಗೆ ಒಂದು ಹೊಸ ಆಯಾಮ ನೀಡಿದ ಪ್ರತಿಭಾವಂತರೆಂದು ಸಾಬೀತುಪಡಿಸಲಾಗಿದೆ. 'ಸಂಗೀತದ ಹೃದಯ ಸಂಗಮ' ಎಂಬ ಐದನೆಯ ಶೀರ್ಷಿಕೆಯಡಿಯಲ್ಲಿ ಹೊಸತನಕ್ಕಾಗಿ ತುಡಿಯುವ ವಿಜಯ ಭಾಸ್ಕರ್‌ರ ವಿವಿಧ ಪ್ರಯೋಗಶೀಲ ಚಲನಚಿತ್ರಗಳನ್ನು ಗೀತೆಯ ಉದಾಹರಣೆಗಳೊಂದಿಗೆ ಚರ್ಚಿಸಲಾಗಿದೆ. ಚಲನಚಿತ್ರ ಜಗತ್ತಿನ ಇತರರೊಂದಿಗೆ ವಿಜಯ ಭಾಸ್ಕರ್ ಹೊಂದಿರುವ ನಿಕಟ ಸಂಬಂಧಗಳ ಕುರಿತು ಅಲ್ಲಲ್ಲಿ ಮಾಹಿತಿ ನೀಡಲಾಗಿದೆ. 'ಸೃಜನಶೀಲ ಪ್ರಯೋಗ' ಎಂಬ ಕೊನೆಯ ಶೀರ್ಷಿಕೆಯಲ್ಲಿ ಅನೇಕ ವೈಫಲ್ಯಗಳ ನಡುವೆಯು ಸತತ ಪ್ರಯೋಗಗಳು ಫಲ ನೀಡುತ್ತವೆ

[4] ದೊಡ್ಡರಂಗೇಗೌಡ. (2009). *ವಿಜಯ ಭಾಸ್ಕರ್.* ಪುಟ. XI
[5] ಅದೇ. ಪುಟ. VIII

ಎಂಬುದನ್ನು ವಿಜಯಭಾಸ್ಕರ್‌ರು ತಮ್ಮ ವೃತ್ತಿ ಜೀವನದ ಮೂಲಕ ಸಾಬೀತುಪಡಿಸಿದ್ದಾರೆ. ಅವರ ಕೊನೆಯ ಚಿತ್ರ 'ಶ್ರಾವಣ ಸಂಭ್ರಮ'ದ ವರಗೆ ಅನೇಕ ಮಾಹಿತಿಗಳನ್ನು ನೀಡಿದ್ದಾರೆ. ಇವುಗಳ ನಂತರ ಕೊನೆಯಲ್ಲಿ ವಿಜಯ ಭಾಸ್ಕರ್‌ರ ಕುರಿತಾದ ಎರಡು ಕವಿತೆಗಳು ಅನುಬಂಧದಲ್ಲಿ ಚಲನಚಿತ್ರಗಳ ವಿವರ, ಪ್ರಶಸ್ತಿ, ಗೌರವಗಳ ವಿವರ ಹಾಗೂ ಕೆಲವು ಅಪರೂಪದ ಭಾವಚಿತ್ರಗಳನ್ನು ಸಂಗ್ರಹಿಸಿಕೊಡಲಾಗಿದೆ.

ದೊಡ್ಡರಂಗೇಗೌಡ ಅವರ 'ವಿಜಯ ಭಾಸ್ಕರ್' ಕೃತಿಯು ವಿಜಯಭಾಸ್ಕರ್‌ರ ವೈಯಕ್ತಿಕ ವಿವರಗಳನ್ನು ನೀಡುವಲ್ಲಿ ಯಶಸ್ವಿಯಾಗಿದ್ದು, ಸಂಪೂರ್ಣವಾಗಿ ಅವರ ಜೀವನಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ನೀಡುವಲ್ಲಿ ವಿಫಲವಾಗುತ್ತದೆ. ಅಲ್ಲದೆ ಸಾಹಿತ್ಯದ ರಸವತ್ತತೆಯನ್ನು ಕಡಿಮೆ ಮಾಡಿಕೊಂಡು ವಿಜಯ ಭಾಸ್ಕರ್‌ರ ವೃತ್ತಿ ಜೀವನದ ಮೇಲೆಯೇ ಹೆಚ್ಚು ಕೇಂದ್ರೀಕೃತಗೊಂಡ ಕೃತಿಯಾಗಿದೆ. ಅಂಕಿ ಅಂಶಗಳನ್ನು ಇಲ್ಲವೇ ದತ್ತಾಂಶಗಳನ್ನು ನೀಡುವುದರಲ್ಲಿಯೇ ಜೀವನ ಚರಿತ್ರೆಯು ಪೂರ್ಣಗೊಂಡಿದೆ. ಇಲ್ಲಿ ಮಾಹಿತಿಯ ಕೊರತೆಯೋ ಅಥವಾ ಪ್ರಕಟನಾಕಾರರ ಪುಟ ಮಿತಿಯೋ ಕಾರಣದಿಂದಾಗಿ ಜೀವನ ಚರಿತ್ರೆಯಾಗಿ ರೂಪಗೊಳ್ಳುವಲ್ಲಿ 'ವಿಜಯ ಭಾಸ್ಕರ್' ಎಂಬ ಕೃತಿ ಎಡವಿದೆ. ವಿಜಯ ಭಾಸ್ಕರ್‌ರ ಬಾಲ್ಯ ಜೀವನದಲ್ಲಿ ಹುಟ್ಟಿದ ವರ್ಷ, ಸ್ಥಳ, ತಂದೆ, ತಾಯಿಯ ಹೆಸರುಗಳನ್ನು ಬಿಟ್ಟರೆ ಉಳಿದ ಮಾಹಿತಿಗಳು ಕಂಡುಬರುವುದಿಲ್ಲ. ಬಾಲ್ಯದ ಕೆಲವು ಘಟನೆಗಳು ಸಂಗೀತದೆಡೆಗಿನ ಆಸಕ್ತಿಯನ್ನು ನೆನಪಿಸುತ್ತವೆ. ತಂದೆಯಾಸೆ ಮಗನು ಇಂಜಿನಿಯರ್ ಆಗಬೇಕೆಂಬುದು ಆದರೆ ಮಗನ ಮನಸ್ಸು ಸಂಗೀತದಲ್ಲಿ ನೆಟ್ಟಿತ್ತು. ವಿದ್ಯಾಭ್ಯಾಸದ ಬಗ್ಗೆ ತಿಳಿಸದೇ ಸಂಗೀತಾಭ್ಯಾಸದ ಕುರಿತಾಗಿ ಮಾಹಿತಿ ನೀಡಲಾಗಿದೆ. ಒಟ್ಟಾರೆ ಕೃತಿಯ ಅವಲೋಕನ ಮಾಡಿದಾಗ 'ವಿಜಯಭಾಸ್ಕರ್' ಅವರ ಸಂಗೀತ ಜೀವನ, ಘಟನೆ ಹಾಗೂ ಸಾಧನೆಗಳ ಕುರಿತಾಗಿಯೇ ಕೃತಿಯಲ್ಲಿ ಚರ್ಚಿಸಲಾಗಿದೆ. ವಿಜಯಭಾಸ್ಕರ್ ಅವರ ವೈಯಕ್ತಿಕ ಬದುಕನ್ನು ತೋರಿಸುವಲ್ಲಿ ಕೃತಿ ವಿಫಲವಾಗಿದೆ. ಇಲ್ಲಿ ವಿಜಯಭಾಸ್ಕರ್ ಅವರ ಸಂಗೀತ ಸಾಧನೆಯನ್ನು ಒಂದು ಮುಖವೆಂದು ಭಾವಿಸಿದರೆ ಅವರ ಜೀವನದ ಇತರೆ ಮುಖಗಳನ್ನು ಇಲ್ಲಿ ತೋರಿಸಿಲ್ಲ. ಆದರೆ ಒಟ್ಟಾರೆ ಕೃತಿಯನ್ನು ಗಮನಿಸಿದಾಗ ವಿಜಯಭಾಸ್ಕರ್ ಅವರ ಸಂಗೀತ ಜೀವನದ ಬಗ್ಗೆ ಹತ್ತಾಂಶಗಳನ್ನು ಸಂಗ್ರಹಿಸುವ ಅಥವಾ ಸಾಧನೆಯನ್ನು ಓದಬಯಸುವ ಸಹೃದಯರಿಗೆ ಉತ್ತಮ ಕೃತಿಯಾಗಿದೆ.

ದೊಡ್ಡರಂಗೇಗೌಡ ಅವರ ಇತರೆ ಗದ್ಯ ಸಾಹಿತ್ಯಕ್ಕೆ ಹೋಲಿಕೆ ಮಾಡಿನೋಡಿದಾಗ ಜೀವನ ಚರಿತ್ರೆಗಳ ರಚನೆಯಲ್ಲಿ ಕೊರತೆ ಕಂಡುಬರುತ್ತದೆ. "ವಿಜಯ ಭಾಸ್ಕರ್ ಮೂಲತಃ ಬೆಂಗಳೂರಿನವರು. 1931 ರಲ್ಲಿ ಜನಿಸಿದ ಇವರ ತಂದೆ ಕೃಷ್ಣಮೂರ್ತಿ, ತಾಯಿ ಜೀಜಾಬಾಯಿ. ಮನೆಯಲ್ಲಿ ಸದಾ ಸಂಗೀತದ ವಾತಾವರಣವೇ ಇರುತ್ತಿತ್ತು. ಮನೆಯ ಹತ್ತಿರವೇ ದೇವಸ್ಥಾನ. ಅಲ್ಲಿ ಯಾವಾಗಲೂ ಹರಿಕಥೆ, ಭಜನೆ, ಭಕ್ತಿ ಗೀತೆಗಳ ಅನುರಣನ, ಪಕ್ಕದಲ್ಲೆ ಅಕ್ಕಸಾಲಿಗರ ಅಂಗಡಿ, ಅಲ್ಲಂತೂ ಯಾವಾಗಲೂ ಹಿಂದಿ ಚಿತ್ರಗೀತೆಗಳ ಅವಿರತ ಮೊಳಗು. ಹೀಗಾಗಿ ಬಾಲ್ಯದಲ್ಲೇ ಸಂಗೀತದ ಪ್ರಭಾವ ಎಳೆಯ ಬಾಲಕನ ಮೇಲೆ".[6] ಹೀಗೆ ವಿಜಯ ಭಾಸ್ಕರ್‌ರ ಹುಟ್ಟು, ಬಾಲ್ಯ ಮತ್ತು ಬಾಲ್ಯದ ಸಂಗೀತಾಸಕ್ತಿಯ ಕುರಿತು ಒಂದೇ ಪರಿಚ್ಛೇದದಲ್ಲಿ ಹೇಳಿರುವುದು ಸಂಕ್ಷಿಪ್ತ, ಸರಳತೆಗೆ ಮೆರಗು ನೀಡಿದರೆ, ಅವರ ಬಾಲ್ಯ ಜೀವನದ ಇನ್ನಷ್ಟು ವಿಚಾರಗಳನ್ನು ತರಬಹುದಾಗಿತ್ತು ಎಂಬುದನ್ನು ಅಲ್ಲಗಳೆಯಲಾಗದು.

1931ರ ಸೆಪ್ಟಂಬರ್ 2 ರಂದು ಜನಿಸಿದ ವಿಜಯಭಾಸ್ಕರ್ ಅವರು ಸಂಗೀತಾಸಕ್ತಿ ಸಹಜವಾಗಿ ಬೆಳೆದದ್ದು. ಮನೆಯ ಪಕ್ಕದಲ್ಲಿಯೆ ಜರುಗುತ್ತಿದ್ದ

[6] ಅದೇ. ಪುಟ. 2

ಹರಿಕಥೆ, ಭಜನೆ, ಭಕ್ತಿ ಗೀತೆಗಳ ಅನುರಣನವೆ ಇದಕ್ಕೆ 'ಸಾತ್ ಪರೇಡ್' ಮೈದಾನದಲ್ಲಿ ಜರುಗುತ್ತಿದ್ದ ಪಾಶ್ಚಾತ್ಯ ಮಾದರಿಯ ವಾದ್ಯಗೋಷ್ಠಿ ಇದಕ್ಕೆ ಇಂಪು ನೀಡಿತು. ತಂದೆಯ ಆಸೆಯಂತೆಯೇ ಇಂಜಿನೀಯರಿಂಗ್ ಓದಿದರು. ಈ ನಡುವೆ ನಾರಾಯಣಸ್ವಾಮಿಗಳ ಬಳಿ ಕರ್ನಾಟಕ ಸಂಗೀತ, ಜಿ.ವಿ. ಭಾವೆಯವರ ಬಳಿ ಹಿಂದೂಸ್ತಾನಿ ಸಂಗೀತ ಹಾಗೂ ಲೀನೀ ಹಂಟ್ ಬಳಿ ಪಾಶ್ಚಾತ್ಯ ಸಂಗೀತವನ್ನು ಕಲಿತರು. ಸಂಗೀತದೊಂದಿಗೆ ಕೆಲವು ವಾದ್ಯ ನುಡಿಸುವುದರಲ್ಲಿಯೂ ಪರಿಣತಿ ಪಡೆದರು. ಭವಿಷ್ಯಕ್ಕಾಗಿ ಸಂಗೀತವನ್ನು ಆಯ್ಕೆ ಮಾಡಿಕೊಂಡು ಮುಂಬೈನತ್ತ ಪ್ರಯಾಣ ಬೆಳೆಸಿದರು. ಹಿಂದಿ ಚಿತ್ರರಂಗದ ನೌಷಾದ್ ಅಲೀ ಎಂಬುವರ ಬಳಿ ಸಹಾಯಕರಾಗಿ ಕೆಲಸ ಮಾಡಿದರು. 1954 ರಲ್ಲಿ 'ಶ್ರೀರಾಮಪೂಜಾ' ಕನ್ನಡ ಚಲನಚಿತ್ರಕ್ಕೆ ಅವಕಾಶ ಸಿಕ್ಕಾಗ 'ತಾನು ಇನ್ನು ಮೇಲೆ ಸ್ವತಂತ್ರನಾಗಿ ಸಂಗೀತ ನಿರ್ದೇರ್ಶನ ಮಾಡಬಲ್ಲೆ' ಎಂಬ ಆತ್ಮಸ್ಥೈರ್ಯದೊಂದಿಗೆ ಕರ್ನಾಟಕಕ್ಕೆ ಮರಳಿದರು. ಶ್ರೀರಾಮ ಪೂಜಾ ಚಿತ್ರವು ವಿಜಯ ಭಾಸ್ಕರ್ ಸಂಗೀತ ನಿರ್ದೇಶನದಲ್ಲಿ ಮೂಡಿಬಂದ ಮೊದಲ ಚಲನಚಿತ್ರ. 1956 ರಲ್ಲಿ 'ಭಾಗ್ಯಚಕ್ರ' ಚಿತ್ರಕ್ಕೆ ಸಂಗೀತದೊಂದಿಗೆ ಕಥೆ, ಚಿತ್ರಕತೆಯ ನಿರ್ವಹಣೆಯನ್ನು ಮಾಡಿದರು. 1957 ರಲ್ಲಿ 'ಪ್ರೇಮದ ಪುತ್ರಿ', 1960 ರಲ್ಲಿ 'ರಾಣಿ ಹೊನ್ನಮ್ಮ' ಚಿತ್ರದ ಗೀತೆಗಳು ಸ್ವಲ್ಪ ಮಟ್ಟದ ಹೆಸರನ್ನು ತಂದುಕೊಟ್ಟವು. ಆದರೆ 1963 ರಲ್ಲಿ ತೆರೆಕಂಡ 'ಸಂತ ತುಕರಾಂ' ಚಿತ್ರದ ಹಾಡುಗಳು ಸಂಗೀತ ಮಾಧುರ್ಯ ಪ್ರಧಾನವಾಗಿದ್ದು, ಬಹುಬೇಗನೆ ಜನಪ್ರೀಯತೆ ಗಳಿಸಿಕೊಂಡವು. ಇದು ವಿಜಯ ಭಾಸ್ಕರ್ ಅವರ ಜೀವನದ ಮೈಲಿಗಲ್ಲು ಎನ್ನಬಹುದು. ಪ್ರಯೋಗಶೀಲರಾಗಿದ್ದ ಅವರು 'ಮನಮೆಚ್ಚಿದ ಮಡದಿ' ಚಿತ್ರದ ವಿಷಯದಲ್ಲಿ ಕುವೆಂಪುರವರ 'ಜಯಭಾರತ ಜನನಿಯ ತನುಜಾತೆ'ಯನ್ನು ಹಿನ್ನೆಲೆ ಗೀತೆಯಾಗಿ ಒದಗಿಸಿದರು. ಮುಂದೆ ಈ ಗೀತೆಯ ನಾಡಗೀತೆಯಾಗಲು ಈ ಪ್ರಯೋಗವೇ ಕಾರಣವಾಯಿತು.

ಸುಮಾರು 172ಕ್ಕೂ ಹೆಚ್ಚು ಬೇರೆ ಬೇರೆ ಭಾಷೆಯಲ್ಲಿ ಸಂಗೀತ ನಿರ್ದೇಶನ ಮಾಡಿದ ಕೀರ್ತಿ ವಿಜಯಭಾಸ್ಕರ್ ಅವರಿಗೆ ಸಲ್ಲುತ್ತದೆ. ಈ ಸಾಧನೆಯ ಹಾದಿಯಲ್ಲಿ ಅನೇಕ ಗೌರವಾದರಗಳನ್ನು ಪಡೆದಿರುವುದನ್ನು ಪಟ್ಟಿ ರೂಪದಲ್ಲಿ ದೊಡ್ಡರಂಗೇಗೌಡ ಅವರು ನೀಡಿದ್ದಾರೆ. ಕನ್ನಡ ಮಾತ್ರವಲ್ಲದೆ ಹಲವು ಭಾಷೆಗಳ ಕಲಾತ್ಮಕ ಚಿತ್ರಗಳನ್ನೂ ತಮ್ಮ ಸಂಗೀತದಿಂದ ಮಹತ್ವವನ್ನಾಗಿಸಿದ ವಿಜಯ ಭಾಸ್ಕರ್ ಆಡೂರ್ ಗೋಪಾಲಕೃಷ್ಣನ್ ಅವರ ಚಿತ್ರಗಳಿಗೂ ಸಂಗೀತ ನೀಡಿದ ವಿಶೇಷ ಹೆಗ್ಗಳಿಕೆ ವಿಜಯ ಭಾಸ್ಕರ್ ಅವರದ್ದು. 'ಮಲಯ ಮಾರುತ' ಮತ್ತು 'ಮುರುಳಿಗಾನ ಅಮೃತ ಪಾನ್' ಚಿತ್ರಗಳಿಗೆ ಪ್ರತಿಷ್ಠಿತ 'ಸುರ್‌ಸಿಂಗಾರ್ ಸಂಸದ' ಗೌರವ ದೊರೆತಿದೆ. ಈ ಗೌರವ ಪಡೆದ ದಕ್ಷಿಣ ಭಾರತದ ಮೊದಲ ಸಂಗೀತ ನಿರ್ದೇಶಕರು ಎಂಬ ಖ್ಯಾತಿಗೆ ಪಾತ್ರರಾಗಿದ್ದಾರೆ.

ನಾಡಿನ ಶ್ರೇಷ್ಠ ಗಾಯಕರಾದ ಕಸ್ತೂರಿ ಶಂಕರ್, ಬಿ.ಆರ್.ಛಾಯಾ, ಬಿ.ಕೆ.ಸುಮಿತ್ರ ಅವರನ್ನು ಕನ್ನಡ ಚಿತ್ರರಂಗಕ್ಕೆ ಪರಿಚಯಿಸಿದರು. ಲಕ್ಷ್ಮಣರಾವ್ ಮೊಹಿತೆ ಅವರನ್ನು ಚಿತ್ರರಂಗಕ್ಕೆ ಪರಿಚಯಿಸಿ ಅವರಿಗೆ 'ಗೀತಪ್ರಿಯ' ಎಂಬ ಹೆಸರನ್ನು ಸೂಚಿಸಿದವರು ವಿಜಯ ಭಾಸ್ಕರವರು. ಅನೇಕ ರಾಷ್ಟ್ರೀಯ, ರಾಜ್ಯ ಪ್ರಶಸ್ತಿಗಳನ್ನು ತಮ್ಮ ಅಪೂರ್ವವಾದ ಕಾರ್ಯಕೌಶಲ್ಯಗಳಿಂದ ತಮ್ಮದಾಗಿಸಿಕೊಂಡಿದ್ದಾರೆ. "ವಿಜಯ ಭಾಸ್ಕರ್ ಅವರು ತಮ್ಮ ಪ್ರತಿಭಾವಂತ ಶಿಷ್ಯ 'ಸಂಗೀತರಾಜ'ನನ್ನು (ಎಸ್.ಪಿ. ವೆಂಕಟೇಶ) ತಮ್ಮ ಪರಂಪರೆಯ ಮುಂದುವರಿಕೆಗಾಗಿ ಬಿಟ್ಟು ಹೋಗಿದ್ದಾರೆಂಬುದು ಅತ್ಯಂತ ಸಂತೋಷದ ಸಂಗತಿಯಾಗಿದೆ".[7] ಅವರು ಇಹ ಜಗತ್ತಿನಿಂದ ದೂರಾಗಿದ್ದರೂ ನಮ್ಮೆಲ್ಲರ ಮನೋಲೋಕದಲ್ಲಿ

[7] ವಿಜಯ ಭಾಸ್ಕರ್, ದೊಡ್ಡರಂಗೇಗೌಡ, ಪು. 48

ಚಿರಂತನರಾಗಿದ್ದಾರೆ. ಅವರ ಸಂಗೀತಕ್ಕೆ ಸಾವಿಲ್ಲ. ಅವರ ಗೀತೆಗಳ ಸ್ವರಪ್ರಸ್ತಾರ ಶಾಶ್ವತವಾಗಿದೆ.

ಹೀಗೆ ದೊಡ್ಡರಂಗೇಗೌಡ 'ವಿಜಯ ಭಾಸ್ಕರ್'ರ ಜೀವನ ಚರಿತ್ರೆಯನ್ನು ಪೂರ್ಣಗೊಳಿಸುತ್ತಾರೆ. ನಂತರ ಅವರ ಕುರಿತಾಗಿ ಎರಡು ಕವಿತೆಗಳನ್ನು ರಚಿಸಿದ್ದು ಮತ್ತೆ ಕೊನೆಯಲ್ಲಿ ವಿಜಯಭಾಸ್ಕರ್ ಅವರ ಸಂಗೀತ ನಿರ್ದೇಶನದಲ್ಲಿ ಮೂಡಿಬಂದ ಚಲನಚಿತ್ರಗಳ ಪಟ್ಟಿ ಹಾಗೂ ಅವರು ಪಡೆದ ಪ್ರಶಸ್ತಿ, ಪುರಸ್ಕಾರಗಳ ಪಟ್ಟಿಯನ್ನು ನೀಡಲಾಗಿದೆ. ಒಟ್ಟಾರೆ ಜೀವನ ಚರಿತ್ರೆಯನ್ನು ಅವಲೋಕಿಸಿದಾಗ ಸಂಕ್ಷಿಪ್ತವಾಗಿ ವಿಜಯಭಾಸ್ಕರ್‌ರ ಕುರಿತು ದಾಖಲಾತಿಯನ್ನು ಒದಗಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ದೊಡ್ಡರಂಗೇಗೌಡ ಅವರ ಕಾವ್ಯಗಳ ಮುಂದೆ ಜೀವನ ಚರಿತ್ರೆಗಳು ಅಷ್ಟಾಗಿ ಓದುಗರನ್ನು ಹಿಡಿದಿಡುವಲ್ಲಿ ವಿಫಲವಾಗಿವೆ. ಸಂಗೀತ ನಿರ್ದೇಶಕರ ಕುರಿತಾಗಿ ಸಂಕ್ಷಿಪ್ತ ದಾಖಲಾತಿಯನ್ನು ನೀಡಿ ಮಹನೀಯರನ್ನು ಸ್ಮರಿಸುವ ಕಾರ್ಯವಂತೂ ಇಲ್ಲಿ ನಡೆದಿದೆ.

### ಪಿ. ಕಾಳಿಂಗರಾವ್

ದೊಡ್ಡರಂಗೇಗೌಡ ಅವರು ರಚಿಸಿದ ಎರಡನೆಯ ಜೀವನಚರಿತ್ರೆ ಪಿ. ಕಾಳಿಂಗರಾವ್ ಅವರದು. ಇದು ಕೂಡ ವಿಜಯಭಾಸ್ಕರ್ ಅವರಂತೆ ಕನ್ನಡ ಚಲನಚಿತ್ರರಂಗ ಕಂಡಂತಹ ಅಪರೂಪದ ವ್ಯಕ್ತಿಗಳಲ್ಲಿ ಒಬ್ಬರಾದ ಪಿ. ಕಾಳಿಂಗರಾವ್ ಅವರ ಕುರಿತಾಗಿದೆ. 'ಸುಗಮ ಸಂಗೀತದ ಹರಿಕಾರ'ರೆನಿಸಿಕೊಂಡು ಕನ್ನಡ ಸಂಗೀತ ಪ್ರಪಂಚಕ್ಕೆ ಅಮೂಲ್ಯವಾದ, ಅನನ್ಯವಾದ ಕೊಡುಗೆಯನ್ನು ನೀಡಿದವರು ಪಿ. ಕಾಳಿಂಗರಾವ್. ಇವರ ಪೂರ್ಣ ಹೆಸರು ಪಾಂಡೇಶ್ವರ ಕಾಳಿಂಗರಾವ್. ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲೂಕಿನ ಆರೂರಿನಲ್ಲಿ 31ನೇ ಅಗಸ್ಟ್ 1914 ರಲ್ಲಿ ಜನಿಸಿದರು. ಇವರ ತಂದೆ ಪಾಂಡೇಶ್ವರ ಪುಟ್ಟಯ್ಯನವರು ಯಕ್ಷಗಾನದಲ್ಲಿ ಹೆಸರು ಮಾಡಿದವರು. ತಮ್ಮ ಮಾವ ಮಂಜಯ್ಯನಿಂದ ಸಂಗೀತ ಪ್ರೇರಣೆಯನ್ನು ಪಡೆದು ಕನ್ನಡದ ಹೆಸರಾಂತ ಗಾಯಕ, ಸಂಗೀತ ನಿರ್ದೇಶಕ ಹಾಗೂ ಸುದಾಮ ಸಂಗೀತದ ಹರಿಕಾರ ಎಂಬ ಹೆಸರನ್ನು ಪಡೆದವರು ಪಿ. ಕಾಳಿಂಗರಾವ್ ಅವರು.

"ರಾಗವಿಲ್ಲದ ಲೋಕವಿಲ್ಲ ಮನುಕುಲದ ಉಗಮವೂ ರಾಗಮೂಲ. ಓಂಕಾರದಲ್ಲಿದೆ ಅಖಿಲರಾಗದ ಅಂತರಾಳ । ಎಲ್ಲಿರಾಗ ಅಲ್ಲಿ ಭೋಗ, ತ್ಯಾಗ, ಯೋಗ ಎಲ್ಲವೂ ಬೇರೆ ಬೇರೆ ಆಯಾಮಗಳಲ್ಲಿ ಅದರ ಸಂಸರ್ಗ ವ್ಯಾಪಕವಾಗಿ ಹಬ್ಬಕೊಂಡಿರುತ್ತದೆ. ಅದರ ವಿವಿಧ ಸ್ತರದಲ್ಲಿ ಮಾನವನ ಏಳು ಬೀಳುಗಳೆಲ್ಲ ದಾಖಲಾಗಿರುತ್ತವೆ"[8] ಎಂಬ ಮಾತುಗಳೊಂದಿಗೆ ಜೀವನ ಚರಿತ್ರೆಯನ್ನು ಆರಂಭಿಸುವ ಲೇಖಕರು ಮೊದಲಿಗೆ ಒಂದು ಚೌಪದಿಗಳನ್ನು ರಚಿಸಿದ್ದಾರೆ.

***"ಸಂಗೀತ ಎಂಬುದು ಅನನ್ಯ ವಿಶ್ವವಾಣಿ***
***ಪಾಮರಗೂ ಪಂಡಿತಗೂ ಮೆಚ್ಚಿನಾದವಾಹಿನಿ***
***ಮಾನವ ಉನ್ನತಿಗೆ ಸಂಗೀತ ಸಮ್ಮೋಹಿನಿ***
***ಸಂಗೀತ ಸಂಪರ್ಕ ಮಂಗಳಕರ–ಮಣ್ಣಿನಮಗ"***[9]

ಸಂಗೀತದ ಸಂಪರ್ಕ ಮಂಗಳಕರವಾದದ್ದು. ಸಂಗೀತವೆಂಬುದು ವಿಶ್ವವಾಣಿ ಅನನ್ಯವಾದುದು ಎಂಬ ಸಾಲುಗಳ ಮೂಲಕ ಸಂಗೀತ ದಿಗ್ಗಜರಾದ ಪಿ. ಕಾಳಿಂಗರಾವ್ ಅವರ ಜೀವನ ಚರಿತ್ರೆಯ ರಚನೆಗೆ ಮುನ್ನುಡಿ ಹಾಡಿದ್ದಾರೆ. ಕವಿಯೂ ಆದ ಪ್ರೊ. ದೊಡ್ಡರಂಗೇಗೌಡ ಅವರು ತಮ್ಮ ಕವಿತ್ವದ ಛಾಯೆಯನ್ನು ಜೀವನ ಚರಿತ್ರೆಯಲ್ಲಿ ಮುಂದುವರೆಸಿದ್ದಾರೆ. ಅದಕ್ಕೆ ಸಾಕ್ಷಿಯೆಂಬಂತೆ ಆರಂಭದ ಈ ಚೌಪದಿಯಿಂದ ತಿಳಿದುಬರುತ್ತದೆ.

ವಿಜಯ ಭಾಸ್ಕರ್ ಅವರ ಜೀವನ ಚರಿತ್ರೆಯಂತೆಯೇ ಪಿ. ಕಾಳಿಂಗರಾವ್ ಅವರ ಜೀವನ ಚರಿತ್ರೆಯೂ ಸಂಕ್ಷಿಪ್ತವಾಗಿದ್ದು, ನಿಖರತೆಯಿಂದ ಕೂಡಿದೆ. ಅಗತ್ಯಕ್ಕೆ ತಕ್ಕಂತೆ

[8] ಅದೇ. ಪುಟ. 1

[9] ಅದೇ. ಪುಟ. 1

ಕೆಲವೊಂದಿಷ್ಟು ವಿಚಾರಗಳನ್ನು ಅಧ್ಯಾಯಗಳಲ್ಲಿ ಹೇಳಿದ್ದಾರೆ. ಪಿ. ಕಾಳಿಂಗರಾವ್, ಹೆಗ್ಗಳಿಕೆ, ಕನ್ನಡ ಕವಿತೆಗೆ ಕಂಠಸಿರಿ, ಕಾಳಿಂಗರಾಯರ ಕಾಳಜಿ, ಚಲನಚಿತ್ರ ಸಂಗೀತ ಹಾಗೂ ಕೊನೆಯ ದಿನಗಳು ಎಂಬ ಆರು ಶೀರ್ಷಿಕೆಗಳಲ್ಲಿ ಪಿ. ಕಾಳಿಂಗರಾವ್ ಜೀವನದ ಮೆಲುಕುಗಳನ್ನು ಬರಹರೂಪಕ್ಕಿಳಿಸಿದ್ದಾರೆ. ಕೃತಿಯ ಕೊನೆಯಲ್ಲಿ ಪಿ. ಕಾಳಿಂಗರಾವ್ ಅವರು ಹಾಡಿದ, ಸಂಗೀತ ನೀಡಿದ, ನಟಿಸಿದ ಚಲನಚಿತ್ರಗಳ ಪಟ್ಟಿಯನ್ನು ನೀಡಲಾಗಿದೆ.

ಪಿ. ಕಾಳಿಂಗರಾವ್ ಎಂಬ ಮೊದಲ ಅಧ್ಯಾಯದಲ್ಲಿ ಅವರ ಬಾಲ್ಯ ಜೀವನ, ಸಂಗೀತಾಸಕ್ತಿ, ಸಂಗೀತ ಅಭ್ಯಾಸದ ಹಾದಿಯನ್ನು ಗುರುಬಳಗ ಪರಿಚಯದೊಂದಿಗೆ ನೀಡಲಾಗಿದೆ. ಸಂಗೀತ ಕ್ಷೇತ್ರದಲ್ಲಿ ಪಿ. ಕಾಳಿಂಗರಾವ್ ಅವರಿಗೆ ಸಿಕ್ಕ ಮೊದಲ ಅವಕಾಶಗಳ ಕುರಿತಾಗಿ ಮಾಹಿತಿ ನೀಡಲಾಗಿದೆ. ಹೆಗ್ಗಳಿಕೆ ಎಂಬುದು ಎರಡನೆಯ ಅಧ್ಯಾಯದ ಹೆಸರು. "ನಾಡು-ನುಡಿಯ ಬಗ್ಗೆ ಅಪಾರವಾದ ಉಜ್ವಲ ಅಭಿಮಾನ ಹೊಂದಿದ ಕಾಳಿಂಗರಾಯರು ಕರ್ನಾಟಕ ಏಕೀಕರಣಕ್ಕಾಗಿ ದುಡಿದ ಹಿರಿಯ ಕವಿಯಾದ ಹುಯಿಲಗೋಳ ನಾರಾಯಣರಾಯರು ರಚಿಸಿದ ಕವಿತೆ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬುದಕ್ಕೆ ಸಂಗೀತ ನೀಡಿ, ಇಡೀ ನಾಡಿನ ಜನರ ಹೃದಯದಲ್ಲಿ ಕರ್ನಾಟಕದ ಏಕೀಕರಣ ಸ್ಫೂರ್ತಿಯನ್ನು ತುಂಬುವಂತೆ ತಮ್ಮ ತುಂಬಿದ ಇಂಪಾದ ಸಿರಿಕಂಠದಲ್ಲಿ ಹಾಡಿ ರಂಜಿಸುತ್ತಿದ್ದರು. ಕಾರ್ಯಕ್ರಮದ ಪ್ರಾರಂಭದಲ್ಲಿಯೇ ಈ ಹಾಡನ್ನು ತಮ್ಮದೇ ಆದ ರೀತಿಯಲ್ಲಿ, ವಿಶಿಷ್ಟ ಶೈಲಿಯಲ್ಲಿ ಹಾಡುತ್ತಿದ್ದರು. ಕೆಲವು ಬಾರಿ ಈ ಹಾಡಿಗೆ ಅಳವಡಿಸಿರುವ ಮೋಹನರಾಗ ಮತ್ತು ಭಾಗೇಶ್ರೀ ರಾಗಗಳನ್ನು ಹಲವು ನಿಮಿಷ ಸವಿಸ್ತಾರವಾಗಿ ಆಲಾಪಿಸಿ, ನಂತರ ಹಾಡಿನ ನುಡಿಗಳನ್ನು ಹಾಡುತ್ತಿದ್ದರು" ಎಂಬ ವಿಷಯವನ್ನು ದೊಡ್ಡರಂಗೇಗೌಡರು ದಾಖಲಿಸುತ್ತಾರೆ. ನಾಡು-ನುಡಿಯ ಕುರಿತಾಗಿ ಅಪಾರವಾದ ಅಭಿಮಾನವನ್ನು ಹೊಂದಿದ ಪಿ.ಕಾಳಿಂಗರಾವ್ ಅವರು ಜಿ.ಪಿ.ರಾಜರತ್ನಂರ ರತ್ನನ ಪದಗಳು, ಬೇಂದ್ರೆಯವರ ಗೀತೆಗಳು, ಅನಕೃ, ಹುಯಿಲ್‌ಗೋಳ್ ನಾರಾಯಣರಾವ್ ಅವರ ಗೀತೆಗಳಿಗೆ ಸಂಗೀತ ಸಂಯೋಜನೆ ಮಾಡಿ ನಾಡಿನಾದ್ಯಂತ ಹೆಗ್ಗಳಿಕೆಯನ್ನು ಪಡೆದುಕೊಂಡರೆಂಬ ವಿಚಾರವಿದೆ. ಮೂರನೆಯ ಅಧ್ಯಾಯವಾದ 'ಕನ್ನಡ ಕವಿತೆ ಕಂಠಸಿರಿ'ಯಲ್ಲಿ ಕನ್ನಡ ಪ್ರಸಿದ್ಧ ಕವಿಗಳ ಗೀತೆಗಳಿಗೆ ಸಂಗೀತ ಸಂಯೋಜಿಸಿ ಖ್ಯಾತನಾಮರಾದರು. ಅದರಲ್ಲಿಯೂ ಬಿಎಂಶ್ರೀ, ಕುವೆಂಪು, ಬೇಂದ್ರೆ, ಜಿ.ಪಿ.ರಾಜರತ್ನಂ, ಟಿ.ಪಿ.ಕೈಲಾಸಂ, ಕೆ.ಎಸ್.ನರಸಿಂಹಸ್ವಾಮಿ, ಎಂ.ಗೋಪಾಲಕೃಷ್ಣ ಅಡಿಗರ ರಚನೆಗಳಿಗೆ ಜೀವ ತುಂಬುವ ಕಾರ್ಯವನ್ನು ಮಾಡಿದರು. ಅಲ್ಲದೆ ಈ ಸಂದರ್ಭದಲ್ಲಿ ಸೋದನ್ ಕುಮಾರಿ ಮತ್ತು ಮೋಹನ್ ಕುಮಾರಿ ಎಂಬ ಗಾಯನ ಸೋದರಿಯರ ಜೊತೆಗೆ ಕನ್ನಡದ ಅನೇಕ ಜನಪದ ಗೀತೆಗಳಿಗೆ ದನಿಯಾದರು. ಕನ್ನಡ ನುಡಿ, ಸಂಸ್ಕೃತಿ, ರಾಷ್ಟ್ರ ಪ್ರೇಮ ಕುರಿತಾದ ಕವನಗಳು ಪಿ. ಕಾಳಿಂಗರಾವ್ ಅವರ ಸಂಗೀತದಿಂದ ಜಾಗೃತರಾಗುವಂತೆ ಮಾಡಿತು. 'ಕಾಳಿಂಗರಾಯರ ಕಾಳಜಿ'ಯೆಂಬುದು ನಾಲ್ಕನೆಯ ಅಧ್ಯಾಯವಾಗಿದ್ದು, ದೈವದತ್ತವಾಗಿ ಬಂದ ಸಂಗೀತ ಜ್ಞಾನವನ್ನು ಬಹಳ ಪರಿಪೂರ್ಣವಾಗಿ ಅರ್ಥವತ್ತಾಗಿ ವಿನಿಯೋಗಪಡಿಸುತ್ತಿದ್ದ ಕಾಳಿಂಗರಾಯರದು ವಿಶಿಷ್ಟವಾದ ವ್ಯಕ್ತಿತ್ವವಾಗಿತ್ತು. ಭಕ್ತಿಗೀತೆಗಳನ್ನು ಭಾವಪೂರ್ಣವಾಗಿ ಹಾಡುತ್ತಿದ್ದ ಕಾಳಿಂಗರಾಯರದು ಸೃಜನಶೀಲ ಪ್ರತಿಭೆ, ಅವರು "ನನ್ನ ಸಂಗೀತ ಗಗನ ಕುಸುಮವಾದರೆ ಏನು ಪ್ರಯೋಜನ? ನೆಲದ ಮಟ್ಟ ಮುಟ್ಟಿ ಮಣ್ಣಿನ ಮಗ ಕುಣಿಯುವಂತಾಗಬೇಕು"[10] ಎಂದು ಹೇಳುತ್ತಿದ್ದರು ಎಂಬಿತ್ಯಾದಿ ವಿಚಾರಗಳನ್ನು ಪ್ರಸ್ತಾಪಿಸುವ ಕಾಳಿಂಗರಾಯರ ಸಂಗೀತ ಕಾಳಜಿಯನ್ನು ತೋರಿಸಿದ್ದಾರೆ. 'ಚಲನಚಿತ್ರ ಸಂಗೀತ' ಎಂಬ ಐದನೆಯ ಅಧ್ಯಾಯವಾಗಿದ್ದು, ಚಲನಚಿತ್ರ

[10] ದೊಡ್ಡರಂಗೇಗೌಡ. (2009). ಪಿ. ಕಾಳಿಂಗರಾವ್. ಪುಟ. 18

ಕ್ಷೇತ್ರಕ್ಕೆ ಪಿ. ಕಾಳಿಂಗರಾವ್ ಅವರ ಕೊಡುಗೆಗಳ ಪ್ರಸ್ತಾಪವಿದೆ. ಅಂತಿಮ ಅಧ್ಯಾಯವಾದ 'ಕೊನೆಯ ದಿನಗಳು' ಎಂಬ ಅಧ್ಯಾಯದಲ್ಲಿ ಪಿ. ಕಾಳಿಂಗರಾವ್ ಅವರ ಜೀವನದ ಕೊನೆಯ ದಿನಗಳ ಲಘುದರ್ಶನವಿದೆ. "ಪಿ. ಕಾಳಿಂಗರಾಯರು ತಮ್ಮ ಕೊನೆಯ ದಿನಗಳಲ್ಲಿ ದೈಹಿಕವಾಗಿ ಅನಾರೋಗ್ಯಕ್ಕೆ ಗುರಿಯಾಗಿ ನರ್ಸಿಂಗ್ ಹೋಂನಲ್ಲಿದ್ದರು. ಅನಾರೋಗ್ಯದಿಂದ ಇದ್ದರೂ ಅವರು ಸಂಗೀತದ ಗಾಢ ಗುಂಗಿನಿಂದ ತಮ್ಮ ಕೈಲಾಗದಿದ್ದರೂ ಏನೋ ಗುನುಗುತ್ತಿರುತ್ತಿದ್ದರು. ಕೋಲೂರುತ ನಿಧಾನವಾಗಿ ನಡೆಯುತ್ತಿದ್ದರು. 21ನೇ ಸೆಪ್ಟಂಬರ್ 1981 ರಂದು ಇಹಲೋಕವನ್ನು ತ್ಯೇಜಿಸಿ ಸ್ವರ್ಗಸ್ಥರಾದರು" ಎಂಬುದಾಗಿ ಪಿ.ಕಾಳಿಂಗರಾವ್ ಅವರ ಕೊನೆ ಗಳಿಗೆಯನ್ನು ತಿಳಿಸುತ್ತಾರೆ ದೊಡ್ಡರಂಗೇಗೌಡರು. ಕೃತಿಯ ಕೊನೆಯಲ್ಲಿ ಪಿ. ಕಾಳಿಂಗರಾಯರು ಸಂಗೀತ ನಿರ್ದೇಶನ ನೀಡಿದ ಚಲನಚಿತ್ರಗಳು, ಗಾಯನ, ನಟನೆ ಮಾಡಿದ ಚಲನಚಿತ್ರಗಳ ಪಟ್ಟಿಯನ್ನು ದೊಡ್ಡರಂಗೇಗೌಡರು ನೀಡಿದ್ದಾರೆ. ಇದಿಷ್ಟು ಪಿ. ಕಾಳಿಂಗರಾವ್ ಎಂಬ ಜೀವನ ಚರಿತ್ರೆಯ ಇಣುಕು ನೋಟವಾಗಿದೆ.

'ಪಿ. ಕಾಳಿಂಗರಾವ್' ಎಂಬ ಜೀವನ ಚರಿತ್ರೆಯೂ ಕೂಡ ಸಂಕ್ಷಿಪ್ತವಾಗಿದ್ದು, ಅವರ ಜೀವನದ ಎಲ್ಲಾ ಮಗ್ಗಲುಗಳನ್ನು ಪರಿಚಯಿಸುವಲ್ಲಿ ವಿಫಲವಾಗುತ್ತದೆ. ಪ್ರಸ್ತುತ ಕೃತಿಯನ್ನು ಪಿ. ಕಾಳಿಂಗರಾವ್ ಅವರ ಜೀವನ ಚರಿತ್ರೆ ಎನ್ನುವುದರ ಬದಲು ಸಾಧನೆಯ ಹಾದಿ, ಯಶಸ್ಸು, ಅಪಯಶಸ್ಸುಗಳನ್ನೊಳಗೊಂಡ ಸಾಧನಾ ಮಾಲಿಕೆ ಎಂದರೆ ತಪ್ಪಾಗಲಾರದು. ಜೀವನ ಚರಿತ್ರೆಗೆ ಇರಬೇಕಾದ ಎಲ್ಲ ಲಕ್ಷಣಗಳಿದ್ದು, ಕೃತಿಯು ಕೆಲವೊಂದು ಕೊರತೆಗಳನ್ನು ಹೊಂದಿದೆ. ಅಲ್ಲಲ್ಲಿ ಕಾವ್ಯಾತ್ಮಕ ಬರಹವು ಜೀವನ ಚರಿತ್ರೆಯಲ್ಲಿ ಕಂಡುಬರುತ್ತದೆ. ಇದು ಕೃತಿಗೆ ವಿಶೇಷ ಮೆರುಗನ್ನು ನೀಡಿ ಓದುಗರನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ. ಕೃತಿಯ ಆರಂಭದಲ್ಲಿ ಎರಡು ಚೌಪದಿಗಳನ್ನು ಬಳಕೆ ಮಾಡಿ ಸಂಗೀತದ ಮಹತ್ವವನ್ನು ಹೇಳಲಾಗಿದೆ. ನಂತರ ಸುಗಮ ಸಂಗೀತವು ಸಂಗೀತದ ಮುಖ್ಯ ಪ್ರಕಾರಗಳಲ್ಲಿ ಒಂದಾಗಿದ್ದು, ಮಧುರವಾದ ಸಾಹಿತ್ಯ ನಿಷ್ಠವಾದ ಗಾಯನ ಪದ್ಧತಿಯಾಗಿದೆ ಎಂದು ಸುಗಮ ಸಂಗೀತದ ಕುರಿತಾಗಿ ಚರ್ಚೆ ಮಾಡಿದ್ದಾರೆ. ಆನಂತರ ಪಿ. ಕಾಳಿಂಗರಾವ್ ಅವರ ಹುಟ್ಟು, ಜನ್ಮಸ್ಥಳ, ತಂದೆ, ಮಾವ ಮುಂತಾದವುಗಳ ಕುರಿತಾಗಿ ಮಾಹಿತಿಯಿದೆ.

ಪಿ. ಕಾಳಿಂಗರಾವ್ ಆರು ವರ್ಷದ ಬಾಲಕನಿರುವಾಗಲೇ ಮಾವ ಮಂಜಯ್ಯನವರು ಹಾಡುತ್ತಿದ್ದ ದೇವರನಾಮ, ಶ್ಲೋಕಗಳು ಅವರನ್ನು ಪ್ರಚೋದಿಸಿದವು. ಒಳ್ಳೆಯ ಕಂಠ, ಹಾಡುವ ಉತ್ಸಾಹ ಹೊಂದಿದ್ದ ಪಿ. ಕಾಳಿಂಗರಾವ್ ಶಾಲಾ ದಿನಗಳಲ್ಲಿಯೇ 'ಚಂದ್ರಹಾಸ' ಎಂಬ ನಾಟಕದಲ್ಲಿ ಭಾಗವಹಿಸಿ ಬ್ರಿಟಿಷ್ ಅಧಿಕಾರಿಯಿಂದ ಚಿನ್ನದ ಪದಕ ಪಡೆದು ಬೆಳೆಯುವ ಸಿರಿ ಮೊಳಕೆಯಲ್ಲಿಯೇ ಎಂಬುದನ್ನು ಸಾಬೀತುಪಡಿಸಿದರು. ಅನಂತರ ಪ್ರತಿಭೆಯ ಮೇಲೆಯ ನಾಟಕ ಮಂಡಲಿಯಲ್ಲಿ ಸಿಕ್ಕ ಅವಕಾಶವನ್ನು ಸದುಪಯೋಗಪಡಿಸಿಕೊಂಡರು. ಅನೇಕ ನಾಟಕಗಳಲ್ಲಿ ಅಭಿನಯಿಸಿದ ಪಿ. ಕಾಳಿಂಗರಾಯ ಅವರು ಶ್ರೀರಂಗನಾಥ ಭಟ್ಟರಿಂದ ಸುಗಮ ಸಂಗೀತವನ್ನು, ವೆಂಕಣ್ಣ ಮತ್ತು ರಾಮಚಂದ್ರ ಭುವಾ ಮರೇಳ್‌ಕರ್ ಅವರುಗಳಿಂದ ಹಿಂದೂಸ್ತಾನಿ ಸಂಗೀತವನ್ನು ಅಭ್ಯಾಸ ಮಾಡಿದರು. ಮುಂದೆ ತಮ್ಮ ಹದಿಮೂರನೆಯ ವಯಸ್ಸಿನಲ್ಲಿಯೇ ಸಾರ್ವಜನಿಕ ವೇದಿಕೆಗಳಲ್ಲಿ ಕಛೇರಿ ನೀಡಲು ಶುರುಮಾಡಿದರು. ಓದು ಅವರ ಸಂಗೀತ ಸಾಧನೆಯ ಆರಂಭದ ಹಾದಿಯಾಗಿದೆ.

ಪಿ. ಕಾಳಿಂಗರಾಯರು ಕವಿಗಳು ಕಂಡ ಅರ್ಥವನ್ನು ಜನಸಾಮಾನ್ಯರಿಗೂ ಸಹ ಅರ್ಥವಾಗಿಸುವ ಸುಗಮ ಸಂಗೀತದ ಸ್ವತಂತ್ರ ಶೈಲಿಯಂತಹ ಪ್ರಕಾರವನ್ನು ಆವಿಷ್ಕಾರ ಮಾಡಿದ ಹೆಗ್ಗಳಿಕೆಗೆ ಪಾತ್ರರಾದರು. ಹಲವಾರು ನಾಡಗೀತೆಗಳಿಗೆ ದನಿಯಾಗಿ ರಂಜಿಸಿದರು. ಹಲವಾರು ಕನ್ನಡ ಕವಿಗಳ ಕವಿತೆಗಳನ್ನು ಸರಳವಾಗಿ, ಭಾವಪೂರ್ಣವಾಗಿ

ಕೇಳುಗರ ಹೃದಯವನ್ನು ತಣಿಸುವಂತೆ ಹಾಡುತ್ತಿದ್ದರು. ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು, ಎಲ್ಲಾದರೂ ಇರು ಎಂತಾದರೂ ಇರು, ಕನ್ನಡಕೆ ಹೋರಾಡು ಕನ್ನಡದ ಕಂದಾ, ಏರಿಸಿ ಹಾರಿಸಿ ಕನ್ನಡ ಬಾವುಟ, ಯೆಂಡ ಯೆಂಡ್ತಿ ಕನ್ನಡ ಪದಗೋಳ್ ಅಂದ್ರೆ ರತ್ನಂಗ್ ಪ್ರಾಣ ಮುಂತಾದ ಕನ್ನಡ ಕವಿತೆಗಳಿಗೆ ತಮ್ಮ ಕಂಠಸಿರಿಯ ಮೌಲಿಕ ಹೊಸ ಕಳೆಯನ್ನು ಒದಗಿಸಿದರು. ಅನೇಕ ಕೀರ್ತನೆಗಳು, ಭಾವಗೀತೆಗಳು, ರಂಗಗೀತೆಗಳು, ಜನಪದ ಗೀತೆಗಳು, ವಚನಗಳನ್ನು ಹಾಡುವ ಮೂಲಕ ಹೊಸ ಸಂಗೀತ ಲೋಕವನ್ನು ಸೃಷ್ಟಿಸಿದರು.

ಮಂಗಳೂರಿನ ಶ್ರೀ ಅಂಬಾಪ್ರಸಾದಿಕೆ ನಾಟಕ ಮಂಡಳಿಯಲ್ಲಿ ಪಾತ್ರ ನಿರ್ವಹಿಸುತ್ತಿದ್ದ ಕಾಳಿಂಗರಾಯರು ‘ರಾಯರ ಸೊಸೆ’, ಆ ಜನ್ಮ ಕುಮಾರಿ, ನಿರುಪಮಾ, ತುಳಸೀದಾಸ, ಕಾಳಿಯಮರ್ದನ, ವಿಕ್ರಮಶಶಿಕಲಾ ನಾಟಕಗಳಲ್ಲಿ ರಂಗಗೀತೆಗಳನ್ನು ಹಾಡಿ ಮನರಂಜಿಸುತ್ತಿದ್ದರು. ಅಂತೆಯೇ ಜಾನಪದ ಸಂಗೀತದ ಮೋಹಕ ಧಾಟಿಗಳು ಪಿ. ಕಾಳಿಂಗರಾಯರ ಮನಸೆಳೆದು ಶಾಸ್ತ್ರೀಯ ಸಂಗೀತದೊಂದಿಗೆ ಜನಪದ ಸಂಗೀತಕ್ಕೂ ಹೊಸರಂಗವನ್ನು ನೀಡಿದರು. ಆಕಾಶವಾಣಿಯಲ್ಲಿ ಸಾಕಷ್ಟು ಕಾರ್ಯಕ್ರಮಗಳನ್ನು ಶ್ರೀಯುತರು ಕೊಟ್ಟಿದ್ದಾರೆ. ಇವರು 1941ರಲ್ಲಿ ‘ವಸಂತಸೇನ’ ಎಂಬ ಚಲನಚಿತ್ರ ಮೂಲಕ ಚಂದನವನವನ್ನು ಪ್ರವೇಶಿಸಿದರು. ನಂತರ ಕೃಷ್ಣಲೀಲಾ (1947), ಭಕ್ತ ರಾಮದಾಸ (1948), ಕಲಾವಿದ (1949), ನಟಶೇಖರ (1954), ಅಬ್ಬಾ ಆ ಹುಡುಗಿ (1959) ಹಾಗೂ ಮಹಾಶಿಲ್ಪಿ (1966) ಮುಂತಾದ ಚಲನಚಿತ್ರಗಳಿಗೆ ಸಂಗೀತ ನಿರ್ದೇಶನ ಮಾಡಿದರು. ಸುಮಾರು 14 ಕ್ಕೂ ಹೆಚ್ಚು ಚಲನಚಿತ್ರಗಳಿಗೆ ಹಿನ್ನಲೆ ಗಾಯಕರಾಗಿ, ಧ್ವನಿ ನೀಡಿದ ಇವರು ಮೂರು ಚಲನಚಿತ್ರಗಳಲ್ಲಿ ನಟಿಸಿದ್ದಾರೆ. 21 ಕ್ಕೂ ಹೆಚ್ಚು ಗಾಯಕ, ಗಾಯಕಿರನ್ನು ನಾಡಿಗೆ ಪರಿಚಯಿಸಿದ ಕೀರ್ತಿ ಪಿ. ಕಾಳಿಂಗರಾಯರದು. ಅಲ್ಲದೇ ರಾಜಹಂಸ, ಬಾರಯ್ಯ ಬೆಳದಿಂಗಳೆ, ಎದೆ ತುಂಬಿ ಹಾಡಿದೆನು, ಕರುಣಾಳು ಬಾ ಬೆಳಕೆ ಹಾಗೂ ಹಚ್ಚೇವು ಕನ್ನಡದ ದೀಪ ಎಂಬ ಧ್ವನಿಸುರಳಿಗಳನ್ನು ಹೊರತಂದಿದ್ದಾರೆ. ಇದಿಷ್ಟು ಪಿ. ಕಾಳಿಂಗರಾವ್ ಅವರ ಜೀವನ ಚರಿತ್ರೆಯ ಸಂಕ್ಷಿಪ್ತವಾದ ಇಣುಕುನೋಟ.

ಮೇಲ್ಕಂಡ ಜೀವನ ಚರಿತ್ರೆಗಳನ್ನು ಅವಲೋಕಿಸಿದಾಗ ಸಮಾನವಾದ ಅಂಶಗಳೆರಡು ಕೃತಿಗಳಲ್ಲಿಯೂ ಕಂಡುಬರುತ್ತವೆ. ಸಂಕ್ಷಿಪ್ತತೆ, ಸರಳತೆ, ನಿಖರತೆಯಾದ ಲಕ್ಷಣಗಳನ್ನೊಳಗೊಂಡ ಕೃತಿಗಳಾಗಿವೆ. ಇವುಗಳಲ್ಲದೇ ತಮ್ಮ ಅಂಕಣ ಬರಹಗಳಲ್ಲಿ ಅಲ್ಲಲ್ಲಿ ಬಿಡಿ ವ್ಯಕ್ತಿ ಚರಿತ್ರೆಗಳನ್ನು ಕೂಡ ದೊಡ್ಡರಂಗೇಗೌಡರು ರಚಿಸಿದ್ದಾರೆ. ಆದರೆ ಅವುಗಳನ್ನು ವ್ಯಕ್ತಿಚಿತ್ರ ಎಂದು ಕರೆಯಬಹುದಾಗಿದೆ. ‘ನವೋದಯ ಕಾವ್ಯ’ ಎಂಬ ಕೃತಿಯಲ್ಲಿ ಬಿ.ಎಂ.ಶ್ರೀ, ಕುವೆಂಪು, ಬೇಂದ್ರೆ, ಪುತಿನ., ಡಿವಿಜಿ., ವಿ.ಸೀ. ಮುಂತಾದ ಕವಿಗಳ ಜೀವನದೊಂದಿಗೆ ಕಾವ್ಯದ ಕುರಿತಾದ ವಿಮರ್ಶೆಯನ್ನು ಬಿಡಿ ಲೇಖನಗಳಲ್ಲಿ ದೊಡ್ಡರಂಗೇಗೌಡರು ಮಾಡಿದ್ದಾರೆ. ಇನ್ನೊಂದು ಕೃತಿ ‘ಸಮಕಾಲೀನ ಸಾಹಿತ್ಯ’ದಲ್ಲಿ ಅನಂತಮೂರ್ತಿ, ಶಿವರಾಮ ಕಾರಂತ, ಮಾಸ್ತಿ ವೇಂಕಟೇಶ ಅಯ್ಯಂಗಾರ್, ಗೋಕಾಕ್ ಮುಂತಾದವರ ಬದುಕಿನ ಕ್ಷಣಗಳೊಂದಿಗೆ ಅವರ ಸಾಹಿತ್ಯವನ್ನು ವಿಮರ್ಶಿಸುವ ಕಾರ್ಯವನ್ನು ಆ ಕೃತಿಯಲ್ಲಿ ಮಾಡಲಾಗಿದೆ. ಬಿಡಿ ಬರಹಗಳ ರೂಪಗಳಲ್ಲಿ ಮೇಲ್ಕಂಡ ವ್ಯಕ್ತಿಚಿತ್ರಗಳೂ ಮೂಡಿಬಂದರೂ ಅವು ಜೀವನ ಚರಿತ್ರೆಯ ಸಾಲಿಗೆ ಸೇರುವುದಿಲ್ಲ. ಬದಲಾಗಿ ಕೇವಲ ಕೆಲವು ಸಾಹಿತಿಗಳ ಜೀವನದ ಸನ್ನಿವೇಶಗಳನ್ನು ಸ್ಮರಿಸುವ ಕಾರ್ಯವು ನಡೆದಿದೆ. ‘ಸಂಗೀತ ಸಾಮ್ರಾಟರು’ ಎಂಬ ಹೆಸರಿನ ಅಡಿಯಲ್ಲಿ ವಿಜಯಭಾಸ್ಕರ್ ಹಾಗೂ ಪಿ. ಕಾಳಿಂಗರಾವ್ ಅವರ ಜೀವನ ಚರಿತ್ರೆಯನ್ನು ಪ್ರಕಟಿಸಿದ್ದಾರೆ. ಆದರೆ ಈ ಕೃತಿಯಲ್ಲಿ ಯಾವುದೇ ಬದಲಾವಣೆಯಿಲ್ಲ. ಆದರೆ ಅವರಿಬ್ಬರ ಜೀವನ ಚರಿತ್ರೆಯನ್ನು ಒಟ್ಟಾರೆ ಪ್ರಕಟಿಸಲಾಗಿದೆ.

ದೊಡ್ಡರಂಗೇಗೌಡರ ಇತರೆ ಸಾಹಿತ್ಯ ಪ್ರಕಾರಗಳಿಗೆ ಜೀವನ ಚರಿತ್ರೆಗಳನ್ನು ಹೋಲಿಸಿದಾಗ ಜೀವನ ಚರಿತ್ರೆಗಳು ಗೌಣವಾಗಿ ಕಾಣಿಸುತ್ತವೆ. ಉಳಿದ ಸಾಹಿತ್ಯ ಪ್ರಕಾರಗಳಿಗೆ ಅದರಲ್ಲಿಯೂ ಅಂಕಣ ಸಾಹಿತ್ಯ, ವಿಮರ್ಶೆ, ಸಂಶೋಧನೆ, ಪ್ರವಾಸ ಸಾಹಿತ್ಯ ಹಾಗೂ ಕನ್ನಡ ಕಾವ್ಯ ಪ್ರಪಂಚಕ್ಕೆ ಸಾಕಷ್ಟು ಕೊಡುಗೆಯನ್ನು ನೀಡಿದ್ದಾರೆ. ಜನಪ್ರಿಯ ಕವಿಯಾಗಿ ಕನ್ನಡ ಕಾವ್ಯ ಕ್ಷೇತ್ರಕ್ಕೆ ಸಾಕಷ್ಟು ಕೊಡುಗೆ ನೀಡಿದ ಹಾಗೆ ಜೀವನ ಚರಿತ್ರೆ, ಸಾಹಿತ್ಯ ಪ್ರಕಾರಕ್ಕೆ ಅಷ್ಟಾಗಿ ಛಾಪು ಮೂಡಿಸಿರುವುದನ್ನು ಕಾಣಲಾರೆವು. ಕಳೆದ 40 ವರ್ಷಗಳಿಂದಲೂ ಕನ್ನಡ ಸಾಹಿತ್ಯ ಸೇವೆಯನ್ನು ದೊಡ್ಡರಂಗೇಗೌಡರು ಮಾಡುತ್ತ ಬಂದಿದ್ದಾರೆ. ಒಟ್ಟಾರೆಯಾಗಿ ದೊಡ್ಡರಂಗೇಗೌಡ ಅವರು ರಚಿಸಿದ ಜೀವನ ಚರಿತ್ರೆಗಳು ಕನ್ನಡ ಸಾಹಿತ್ಯಕ್ಕೆ ಅವರು ನೀಡಿರುವ ಕೊಡುಗೆಗಳಾಗಿವೆ.

**ಪರಾಮರ್ಶನ ಗ್ರಂಥಗಳು**


- ದೊಡ್ಡರಂಗೇಗೌಡ (ಸಂ.) (1999). *ವಿಚಾರ ವಾಹಿನಿ.* ಕನ್ನಡ ಸಾಹಿತ್ಯ ಅಕಾಡೆಮಿ.
- ಹಳ್ಳಿಕೇರಿ, ಎಫ್.ಟಿ., ಕೆ.ರವೀಂದ್ರನಾಥ. (ಸಂ.) (2016). *ದಶಕದ ಕನ್ನಡ ಸಾಹಿತ್ಯ.* ಕನ್ನಡ ಸಾಹಿತ್ಯ ಪರಿಷತ್ತು.
- ಕನ್ನಡ ಶೈಲಿ ಕೈಪಿಡಿ. (2006). ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಕೋಗಿಲಹಳ್ಳಿ ಕೃಷ್ಣಪ್ಪ. (ಸಂ.) (2016). *ಆದರ್ಶ ಮನುಜ.* ಪ್ರಸ್ತುತ ಪ್ರಕಾಶನ.
- ಸಂಗಮೇಶ ಸವದತ್ತಿಮಠ. (ಸಂ.) (1994). ಸಾಹಿತ್ಯ ಸಂಗಾತಿ. ಪಲ್ಲವಿ ಪ್ರಕಾಶನ.